ಓ.ಎಸ್. ನಂಃ 233/2020
ಪಿ.ಡಬ್ಲ್ಯೂ-2 (ಬೀರಪ್ಪ)

ದಿನಾಂಕ: 03-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ. ಎಮ್.ಜಿ.ಕೆ. ವಾದಿ ಪರ ವಕೀಲರಿಂದಃ**

ನನ್ನ ಹೆಚ್ಚುವರಿ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ಓ.ಎಸ್.ನಂ.543/2021 ರಲ್ಲಿಯ ಆದೇಶ ಪುಟದ ಧೃಡೀಕೃತ ನಕಲನ್ನು ನಿಪಿ-30, ವಾದ ಪತ್ರದ ಧೃಡೀಕೃತ ನಕಲನ್ನು ನಿಪಿ-31, ಲಿಖಿತ ಹೇಳಿಕೆಯ ಧೃಡೀಕೃತ ನಕಲನ್ನು ನಿಪಿ-32, ವಿವಾದಾಂಶಗಳ ಧೃಡೀಕೃತ ನಕಲನ್ನು ನಿಪಿ-33, ಬಾಳವ್ವ ಅಪ್ಪೋಜಿ ಕುರಬೇಟ ಇವರ ಮರಣ ಪ್ರಮಾಣ ಪತ್ರವನ್ನು ನಿಪಿ-34, ಉಪ-ತಹಸೀಲ್ದಾರ ರಾಮದುರ್ಗ ಇವರು ಕೊಟ್ಟ ಹಿಂಬರಹವನ್ನು ಹಾಗೂ ಅದರ ಕಡತಗಳನ್ನು ಒಟ್ಟಾಗಿ ನಿಪಿ-35, ನೀರಿನ ಕರದ ಪಾವತಿಗಳನ್ನು ಒಟ್ಟಾಗಿ ನಿಪಿ-36, ರೇಣುಕಾ ಬೋರವೆಲ್‌ನವರು ಕೊಟ್ಟ ಎಸ್ಟಿಮೇಶನ್ ಪ್ರತಿಯನ್ನು ನಿಪಿ-37, ಬಸವೇಶ್ವರ ಬೋರವೆಲ್‌ನವರು ಕೊಟ್ಟ ಎಸ್ಟಿಮೇಶನ್ ಪ್ರತಿಯನ್ನು ನಿಪಿ-38, ಟ್ಯಾಕ್ಸ ಇನ್ವೈಸ್ ನಿಪಿ-39, ಕಬ್ಬಿನ ತೂಕದ ರಸೀದಿಗಳನ್ನು ಒಟ್ಟಾಗಿ ನಿಪಿ-40, ಗೊಬ್ಬರ ಖರೀದಿ ಮಾಡಿದ ರಸೀದಿಗಳನ್ನು ಒಟ್ಟಾಗಿ ನಿಪಿ-41 ಎಂದು ಗುರುತಿಸಲಾಯಿತು. ಆದ್ದರಿಂದ ಈ ದಾವೆಯನ್ನು ಡಿಕ್ರೀ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಓ.ಎಸ್. ನಂಃ 233/2020
ಪಿ.ಡಬ್ಲ್ಯೂ-2 (ಬೀರಪ್ಪ)

**<u>ಪಾಟೀಸವಾಲುಃ ಶ್ರೀ. ಎಸ್.ಜಿ.ಟಿ. ಪ್ರತಿವಾದಿ 1ಎ ಯಿಂದ 1ಜಿ ರವರ ಪರ ವಕೀಲರಿಂದಃ</u>**

ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ